ದಿನಾಂಕಃ **20-08-2025** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀಸವಾಲುಃ ಶ್ರೀ ಕೆ ಎನ್ ವಕೀಲರಿಂದಃ

ನನ್ನ ತಂದೆಯವರು ದಾವಾ ಆಸ್ತಿಯನ್ನು ಕಲ್ಪತರು ಸಂಸ್ಥೆಯ ಚೀಟಿಯು ಮುಖಾಂತರ ಖರೀದಿ ಮಾಡಿರುತಾರೆ . ನನ್ನ ತಂದೆಯವರು ಖರೀದಿ ಮಾಡಿ ನನ್ನ ತಾಯಿಯ ಹೆಸರಿಗೆ ಬರೇಸಿರುತಾರೆ . ನನ್ನ ತಂದೆಯವರು ಖರೀದಿ ಮಾಡಿರುವುದಕ್ಕೆ ಸಂಬಂದಪಟ್ಟ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಈ ದಾವಾ ಆಸ್ತಿಯಲ್ಲಿ ನನ್ನ ಸಹೋದರ ಸಹೋದರಿಯರಿಗೆ ಭಾಗ ಇರುವುದಿಲ್ಲ. ಅವರಿಗೆ ಇವರಿಗೆ ಭಾಗಾಂಶ ಇರುವುದಿಲ್ಲ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ. ದಾ ಆಸ್ತಿಯು ನನ್ನ ತಾಯಿಯವರ ಸ್ವಯಾರ್ಜಿತ ಸ್ವತ್ತಾಗಿದ್ದು ನನ್ನ ಸಹೋದರ ಸಹೋದರಿಯವರಿಗೆ ಮೋಸ ಮಾಡಿ ನಾನೇ ಪಡೆಯಬೇಕೆಂಬ ಉದ್ದೇಶದಿಂದ ಒತ್ತಾಯ ಪೂರ್ವಕವಾಗಿ ದಾನಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾನಪತ್ರ ಕ್ಕೆ ನನ್ನ ತಮ್ಮನವೇ ಸ್ವತಃ ಬಂದು ಸಹಿ ಮಾಡಿರುತಾರೆ ಎಂದು ನುಡಿಯುತ್ತಾರೆ. ದಾನಪತ್ರ ವಾದ ಬಳಿಕ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡಿರುತ್ತೇನೆ ಎಂದು ನುಡಿಯುತಾರೆ. ದಾನಪತ್ರ ವಾದ ಬಳಿಕ ಸದರಿ ಆಸ್ತಿಯಂ ಮೇಲೆ ನೇತಾಜಿ ಸ್ವತ್ತಿನ ಸಹಾಕರ ಸಂಘಂಲ್ಲಿ ಸಾಲವನ್ನು ಪಡೆದುಕೊಂಡಿರುತ್ತೇನೇ ಎಂದು ನುಡಿಯುತ್ತಾರೆ. ಸದರಿ ಸಾಲವು ಪೂರ್ತಿಯಾಗಿ ತೀರಿಸಿರುವುದಿಲ್ಲ. ನಮ್ಮ ವಾದಪತ್ರದಲ್ಲಾಗಲೀ, ಪ್ರಮಾಣಪತ್ರದಲ್ಲಾಗಲೀ ದಾವಾ ಅಸ್ತಿಯು ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದು ಎಲಿಯೂ ಸಹ ನಮೂದು ಆಗಿರುವುದಿಲ್ಲ. ದಾನ ಪತ್ರ ವಾದ 2 ವರ್ಷದ ಬಳಿಕ ನನ್ನ ತಾಯಿಯವರು ನನ್ನ ಜೊತೆ ಬಂದು ವಾಸ ಇರುತ್ತಾರೆ . ದಾವಾ ಆಸಿತಯಲ್ಲಿ ನನ್ನ ತಾಯಿಯನ್ನು ನಮ್ಮ ಜೊತೆಯಲ್ಲಿ ಇಟ್ಟುಕೊಂಡಿರುವುದಿಲ್ಲ ಅದರೆ ಹೊರಗೆ ಒಂದು ಕೋಣೆಯಲ್ಲಿ ಅವರು ಹೇಳಿದಂತೆ ಕಟ್ಟುಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಹಾಗೂ ನನ್ನ ತಾಯಿಯವರು ಸೇರಿ ಅವರನ್ನು ನಾನು ಚೆನ್ನಾಗಿ ನೋಡಿಕೊಳ್ಳುತೇನೆ ಎಂದು ಒಂದು ಒಪ್ಪಂದ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದಕ್ಕೆ ನಾನು ಹಾಗೂ ನನ್ನ ತಾಯಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ನನ್ನ ತಾಯಿಯವರು ಉಪವಿಭಾಗಧಿಕಾರಿ ಕಛೇರಿಯಿಂದ ಹಿರಿಯ ನಾಗರೀಕ ಹಿತರಕ್ಷಣಾ ಕಾಯಿದೆ ಅಡಿ ಒಂದು ಆರ್ಜಿಯನ್ನು ಹಾಕಿರುತ್ತಾರೆ ಎದರೆ ಸರಿ . ಅದರ ಪ್ರಕರಣ ಸಂಖ್ಯೆ ಎಂ.ಎ. ಜಿ. ಸಿ. ಅರ್. 2/2019 ಎಂದರೆ ಸರಿ . ಸದರಿ ಅರ್ಜಿಗೆ ಆಗಿರುವ ಆದೇಶದಂತೆ ದಾವಾ ಆಸ್ತಿಯಲ್ಲಿ ನನ್ನ ತಾಯಿಯವರಿಗೆ ಬಿಟ್ಟುಕೊಡಬೇಕು ಎಂದು ಹಾಗೂ ಅವರ ಹೆಸರಿಗೆ ಖಾತಾ ಬದಲಾವಣೆ ಅಗಬೇಕು ಎಂದು ನಮೂದಾಗಿರುವುದಿಲ್ಲ ಹೊರತಾಗಿ ಖಾತೆ ಬದಲಾವಣೆ ಆಗಬೇಕು ಎಂದು ಮಾತ್ರ ಆದೇಶ ವಾಗಿರುತ್ತದೆ . ಸದರಿ ಆದೇಶದ ಪ್ರತಿಯು ಈಗಾಗಲೇ ನಿಪಿ.5 ಎಂದು ನಮೂದಾಗಿದೆ. ಆದಾದ ಬಳಿಕ ನಾನು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಅದರ ಸಂಖ್ಯೆ 85/2019 ಎಂದರೆ ಸರಿ . ಸದರಿ ಮೇಲ್ಮನವಿಯು ನನ್ನ ವಿರುದ್ಧ ವಜಾಗೊಂಡಿರುತ್ತದೆ ಎಂದರೆ ಸರಿ . ಆದಾದ ಬಳಿಕ ಪ್ರತಿವಾದಿಯು ಅನೇಕ ಬಾರಿ ಮನೆಯನ್ನು ಬಿಟ್ಟುಕೊಡಿ ಎಂದು ಕೇದರೂ ಸಹ ನಾನು ಅವರಿಗೆ ಮನೆಯನ್ನು ಬಿಟ್ಟುಕೂಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಇಂದಿಗೂ

ಸಹ ಅವರೇ ಒಂದು ಸಣ್ಣ ಕೋಣೆಯಲ್ಲೇ ಜೀವನ ನೆಡೆಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ . ಜಿಲ್ಲಾಧಿಕಾರಿಗಳ ಆದೇಶದ ಮೇಲೆ ಈ ನ್ಯಾಯಾಲಯದಲ್ಲಿ ದಾವೆ ಹೂಡಲು ಬಾರದೇ ಇದ್ದರೂ ಸಹ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ನಾನು ನನ್ನ ಪ್ರಮಾಣಪತ್ರದಲ್ಲಿ ಗೌರವಾನ್ವಿತ ಉಚ್ಚನ್ಯಾಯಾಕ್ಕೆ ಮೇಲ್ಮನವಿ ಹೋಗಿದ್ದೇವೆ ಎಂದು ತಿಳಿಸಿದ್ದು ಅದಕ್ಕೆ ಸಂಬಂದಪಟ್ಟ ದಾಖಲಾತಿ ಹಾಜರುಪಡಿಸುತ್ತೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಪ್ರತಿವಾದಿಯ ಆಸ್ತಿಯಾಗಿದ್ದರೂ ಸಹ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಯಾವ ಹಾಗೂ ಯಾಕೆ ದಾವೆಯನ್ನು ನ್ಯಾಯಾಲಯಲಕ್ಕೆ ಸಲಿಲಸಿದ್ದೇನೆಎಂದು ನನಗೆ ಮಾಹಿತಿ ಇಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು,
ತಿಪಟೂರು.